ನೀರಾವರಿ ಇಲಾಖೆಯಿಂದ ಮಾಹಿತಿ ತರಿಸಿಕೊಂಡಿದ್ದೇನೆ, ಅವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಅವರ ಇಲಾಖೆಯಿಂದ ಖಂಡಿತ ಉತ್ತರವನ್ನು ಕೊಡುತ್ತಾರೆ, ನೀವು ಕೇಳಿದಕೋಸ್ಕರ ಸ್ವಲ್ಪ ತಡೆದು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬಹಳ ಸಂತೋಷ, ಮೊದಲು ನಾನು ಕೇಳಿದ್ದೆ, ಎಷ್ಟು ಕೆರೆಗಳನ್ನು ತೆಗೆದುಕೊಳ್ಳುತ್ತೀರೆಂದು ಉತ್ತರ ಹೇಳಿದರೆ ಸಾಕು.

ಶ್ರೀ ಕೆ.ಎಸ್. ಈಶ್ವರಪ್ಪ: ಸಣ್ಣ ನೀರಾವರಿ ಇಲಾಖೆಗೆ ಪ್ರಶ್ನೆ ಕೇಳಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್: ಸಿಂಗಟಲೂರು ಏತ ನೀರಾವರಿ ಯೋಜನೆಯನ್ನು ನೋಡಿ ತಮಗೆ ಸಂಬಧವಿಲ್ಲವೆಂದು ತಪ್ಪು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ನಾಗಮಾರಪಲ್ಲಿಯವರು ಹಿಂದೆ ಮಂತ್ರಿಯಾಗಿದ್ದರು, ಆದರೆ ಅವರು ಅರಣ್ಯಕ್ಕೆ ಮಂತ್ರಿಯಾಗಿದ್ದರು.

ಶ್ರೀ ಎಸ್.ಎಸ್. ಪಾಟೀಲ್: ನೀವು ದಯವಿಟ್ಟು ಸಿಂಗಟಾಲೂರು ನೋಡಿ. ಬಳ್ಳಾರಿ ಜಿಲ್ಲೆಗೆ ನೀರು ಹೋಗುತ್ತದೆ, ಹೇಳಿದ್ದೇನೂ ತಪ್ಪಲ್ಲ. ಹಳೆಯ ಯೋಜನೆಯದು ಹೇಳಿ ಬಿಡುತ್ತೀರಿ. ಮೂಲ ಅಂದಾಜು 63 ಕೋಟಿ ರೂಪಾಯಿ, 85 ಕೋಟಿ ರೂಪಾಯಿ ಖರ್ಚಾಗಿದೆ, 20 ಕೋಟಿ ರೂಪಾಯಿ ಹೆಚ್ಚಿಗೆ ಆಗಿದೆ ಎಂದು ಹೇಳುತ್ತೀರಿ. 600 ಕೋಟಿ ರೂಪಾಯಿ ಯೋಜನೆ ಮಾಡಿದ್ದೀರಿ, ಹಳೆಯ ಲೆಕ್ಕ ಕೊಡುತ್ತಿದ್ದೀರಿ. ಈ ರೀತಿ ನಿಮ್ಮ ಅಧಿಕಾರಿಗಳು ಎಲ್ಲೋ ಹೋಗಿ ತೆಗೆದುಕೊಂಡು ಬಂದು ಯಾವುದೋ ಉತ್ತರ ಕೊಟ್ಟು ಇಲ್ಲಿ ಸದನದಲ್ಲಿ ಹೇಳಿಸಿ ಬಿಟ್ಟರೆ ಏನು ಮಾಡುವುದು ಹೇಳಿ. ತಾವೇ ಬಂದಿದ್ದೀರಿ, ತಾವೇ ನೋಡಿದ್ದೀರಿ. ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳು ಭೇಟಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಯಾರು ಪ್ರಶ್ನೆಗಳನ್ನು ಕೇಳಿದ್ದಾರೆ ಅವರು ದಯಮಾಡಿ ಎರಡು ಉಪ ಪ್ರಶ್ನೆಗಳನ್ನು ಕೇಳಬಹುದು. ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ಅವರ ಪರವಾಗಿ ಅವರು ಈಲ್ಡ್ ಆಗಿದ್ದೇನೆಂದರೆ ಅವರಿಗೆ ಅವಕಾಶ ಕೊಡುತ್ತೇವೆ ಅಷ್ಟೆ. ಇನ್ನು ಮುಂದೆ ದಯಮಾಡಿ ಸಹಕರಿಸಬೇಕೆಂದು ಪ್ರಾರ್ಥನೆ.

ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ಪ್ರಗತಿ

152 (792) ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಕಾಚೇನಹಳ್ಳಿ ಏತ ನೀರಾವರಿ ಯೋಜನೆ (ಹಂತ-2 ಮತ್ತು 3) ಯಾವ ಯಾವ ಹಂತಗಳಲ್ಲಿದೆ ಹಾಗೂ ಒದಗಿಸಿರುವ ಹಣ ಎಷ್ಟು ;

(ಆ) ಕಾಚೇನಹಳ್ಳಿ 2 ಮತ್ತು 3ನೇ ಹಂತದ ಸರ್ವೆ ಕೆಲಸ ಯಾವಾಗ ಪ್ರಾರಂಭವಾಯಿತು ಹಾಗೂ ಅದು ಈಗ ಯಾವ ಹಂತದಲ್ಲಿದೆ ;

(ಇ) ಸರ್ವೇ ಪ್ರಗತಿ ವಿಳಂಬವಾಗಿದ್ದಲ್ಲಿ ಕಾರಣಗಳೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಜಲ ಸಂಪನ್ಮೂಲ ಸಚಿವರು):

(ಅ) 2ನೇ ಹಂತದ ನಾಲಾ ಅಗೆತದ ಕೆಲಸವನ್ನು ಭಾಗಶಃ ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಕೆಲವು ಅಡ್ಡಮೋರಿ (ಸಿ.ಡಿ.) ಕಾಮಗಾರಿಗಳು ಮುಗಿದಿರುತ್ತದೆ. ವಿತರಣಾ ನಾಲೆಗಳ ಸರ್ವೆ ಕೆಲಸ ಮುಗಿದಿದ್ದು, ನಾಲಾ ಪಥಗಳ ಅನುಮೋದನೆಯಾಗಿರುತ್ತದೆ. ಅಂದಾಜುಪಟ್ಟಿ ಹಾಗೂ ಭೂಸ್ವಾಧೀನ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

3ನೇ ಹಂತದ ಸರ್ವೆ ಕೆಲಸ ಮುಗಿದಿದ್ದು, ನಾಲಾ ಪಥಗಳ ಅನುಮೋದನೆಯಗಿರುತ್ತದೆ. ಅಂದಾಜು ಪಟ್ಟಿ ಹಾಗೂ ಭೂಸ್ವಾಧೀನ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಈ ಯೋಜನೆಗೆ 2006–07ನೇ ಸಾಲಿನಲ್ಲಿ ರೂ. 10.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

(ಆ) 2 ಮತ್ತು 3ನೇ ಹಂತದ ಸರ್ವೇ ಕೆಲಸವನ್ನು ದಿನಾಂಕ: 08–08–03 ರಂದು ಪ್ರಾರಂಭಿಸಲಾಯಿತು. ಸರ್ವೇ ಕಾರ್ಯ ಮುಗಿದಿರುತ್ತದೆ ಹಾಗೂ ನಾಲಾ ಪಥಗಳ ಅನುಮೋದನೆಯಾಗಿರುತ್ತದೆ. ಅಂದಾಜು ಪಟ್ಟಿ ಹಾಗೂ ಭೂಸ್ವಾಧೀನ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

(ಇ) 3ನೇ ಹಂತದ ನಾಲಾ ಪಥದ ಅನುಮೋದನೆಯಲ್ಲಿ ಗಂಡಸಿ ಶಾಖಾ ಕಾಲುವೆಯ ಅಂತಿಮ ಭಾಗದಲ್ಲಿ ಸುಮಾರು 500 ಮೀ. ಉದ್ದದ ನಾಲೆಯು 22 ಮೀ.ಗಳಷ್ಟು ಡೀಪ್ ಕಟಿಂಗ್‌ನಲ್ಲಿ ಸಾಗುತ್ತಿದ್ದು, ಬದಲಿ ಪಥ (ಆಲ್ಟರ್‌ನೇಟಿವ್ ಅಲೈನ್‌ಮೆಂಟ್) ನಿರ್ಧರಿಸುವಲ್ಲಿ ವಿಳಂಬವಾಗಿರುತ್ತದೆ.

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ, ಕಾಚೇನಹಳ್ಳಿ 2 ಮತ್ತು 3ನೇ ಹಂತದ ಯೋಜನೆಯನ್ನು 8.8.2003ರಿಂದ ಸರ್ವೇ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ, ಈ ಸಾಲಿನಲ್ಲಿ 10 ಕೋಟಿ ರೂಪಾಯಿಗಳನ್ನೂ ಕೂಡ ಒದಗಿಸಿದ್ದೇವೆ ಎನ್ನತಕ್ಕಂತಹ ಮಾತನ್ನು ತಿಳಿಸಿದ್ದಾರೆ. ಅವರು ಹೇಳಿರುವ ಪ್ರಕಾರ ಈಗಾಗಲೇ ಸರ್ವೆ ಕಾರ್ಯ ಮುಗಿದಿರುತ್ತದೆ. ಅಂದಾಜು ಪಟ್ಟಿ ಮತ್ತು ಭೂಸ್ವಾಧೀನ ಪ್ರಸ್ತಾವನೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಎರಡನೇ ಪ್ರಶ್ನೆಗೆ ಹೇಳಿದ್ದೀರಿ. ಮೂರನೇ ಪ್ರಶ್ನೆಗೆ ತಾವೇ ಹೇಳುತ್ತೀರಿ, ಈ ಆಲ್ಟರ್‌ನೇಟಿವ್ ಅಲೈನ್‌ಮೆಂಟ್ ನಿರ್ಧರಿಸುವಲ್ಲಿ ವಿಳಂಬವಾಗಿರುತ್ತದೆ ಎಂದೂ ಕೂಡ ತಾವು ಹೇಳಿದ್ದೀರಿ. ಈ ದ್ವಂದ್ವ ಉತ್ತರ ಏಕೆ ಎನ್ನುವುದನ್ನು ಕೇಳಬಹುದಾ? ನಾನು ಮೂಲಭೂತವಾಗಿ ಕೇಳಿರತಕ್ಕಂಥದ್ದೇ ಸರ್ವೇ ಕಾರ್ಯದಲ್ಲಿ ವಿಳಂಬವಾಗಿದೆ ಎಂದು 8.8.2003ರಲ್ಲಿ ಪ್ರಾರಂಭವಾಗಿರತಕ್ಕಂತಹ ಸರ್ವೆ ಕೆಲಸಕ್ಕೆ ಮೂರು ವರ್ಷಗಳ ಅವಶ್ಯಕತೆ ಇದೆಯಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆ ದಯವಿಟ್ಟು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ ಮಾನ್ಯ ಶಿವರಾಂರವರು ಕೇಳಿದ ಪ್ರಶ್ನೆಯಲ್ಲಿ ತಾವು ಗಮನಿಸಿರಬಹುದು, ಇದು ಟ್ರಿಬ್ಯೂನಲ್‌ಲ್ಲಿರತಕ್ಕಂತಹ ತೀರ್ಮಾ ಕೂಡ ಬಂದಿದೆ. ಇದನ್ನು ತಾವು ಗಮನಿಸಿರಬಹುದು. ಟ್ರಿಬ್ಯೂನಲ್‌ನಲ್ಲಿ ಇದರ ಬಗ್ಗೆ ಒಟ್ಟು 27 ಪ್ರಾಜೆಕ್ಟ್‌ಗಳು ಈ ಭಾಗದಲ್ಲಿ ಕರ್ನಾಟಕ ನೀರಾವರಿ ನಿಗಮದ ಮುಖಾಂತರ ಬರುತ್ತದೆ, ಆ 27 ಯೋಜನೆಗಳನ್ನು ಬಿಟ್ಟು ಬೇರೆ ಯೋಜನೆಗಳನ್ನು ತೆಗೆದುಕೊಳ್ಳಕೂಡದು ಎಂದೂ ಕೂಡ ಟ್ರಿಬ್ಯೂನಲ್‌ನವರು ಸೂಚನೆಯನ್ನು ಕೊಟ್ಟಿದ್ದಾರೆ. ಆದರೂ ಕೂಡ ಆಗಸ್ಟ್ ತಿಂಗಳಲ್ಲಿ ಫೈನಲ್ ಜಡ್ಜ್‌ಮೆಂಟ್ ಬರಬಹುದು ಎನ್ನುವಂತಹ ನಂಬಿಕೆಯಿಂದ ಹಿಂದಿನ 1996–97ರಿಂದ 9 ವರ್ಷದಲ್ಲಿ ನಾಲ್ಕು ಕೋಟಿ 36 ಲಕ್ಷ ರೂಪಾಯಿ ಹಣ ಖರ್ಚಾಗಿದ್ದರೂ ಕೂಡ ಈ ವರ್ಷದಲ್ಲಿ 10 ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆ. ಇದನ್ನು ಮುಗಿಸಬೇಕೆಂಬ ಅಸಕ್ತಿಯಿಂದಲೇ ನಾವು ಇದನ್ನು ಮಾಡುವುದಕ್ಕೆ ಹೊರಟಿರುವುದು. ಈಗ ಏನು ಉತ್ತರ ಕೊಟ್ಟಿದ್ದೇವೆ, ಸರ್ವೆ ಕಾರ್ಯ ಈಗಾಗಲೇ ಮುಗಿದಿದೆ, ನಾಲಾ ಪಥದ ಅನುಮೋದನೆ ಆಗಿರುತ್ತದೆ ಎನ್ನುವ ಮಾತನ್ನು ಈಗಾಗಲೇ ಮುಗಿದಿದೆ, ನಾಲಾ ಪಥದ ಅನುಮೋದನೆ ಆಗಿರುತ್ತದೆ ಎನ್ನುವ ಮಾತನ್ನು ಹೇಳಿದ್ದೇವೆ, ಈ ತರಹದಲ್ಲಿ ನಿಮ್ಮ ಗಮನಕ್ಕೆ ತಂದಿದ್ದೇವೆ ಅಷ್ಟೆ. ಟ್ರಿಬ್ಯೂನಲ್ ಫೈನಲ್ ಅವಾರ್ಡ್ ಬರುತ್ತಿದ್ದ ಹಾಗೆ ಈ ಕಾಮಗಾರಿಯನ್ನು ಮುಗಿಸಿ ನಿಮಗೆ ಕೊಡುತ್ತೇವೆ.

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತು ಇವರು ಈ ಟ್ರಿಬ್ಯೂನಲ್ ತಾವು ಹೇಳುತ್ತೀರಿ ಎಂದು. ಇದು ಮುಂದುವರೆದ ಕಾಮಗಾರಿ. ಕಾಚೇನಹಳ್ಳಿ ಮೊದಲನೇ ಹಂತದ ಕೆಲಸ 1994ರಲ್ಲಿ ಪ್ರಾರಂಭವಾಗಿ ಇಲ್ಲಿಯರೆಗೆ ಎಷ್ಟು ಹಣ ಒದಗಿಸಿದ್ದೀರಿ ಎನ್ನತಕ್ಕಂಥದ್ದು ತಾವು ಹೇಳುತ್ತಿದ್ದೀರಿ. ಅದಾದ ನಂತರ ಇದು ಸ್ಟಿಲ್ ಓವರ್ ವರ್ಕ್ ಎನ್ನುವ ದೃಷ್ಟಿಯಿಂದಲೇ ಈ ಯೋಜನೆಗೆ ಹಣ ಒದಗಿಸಿರತಕ್ಕಂಥದ್ದು ಸರ್ವೆಗೆ ತೊಡಗಿಸಿರತಕ್ಕಂಥದ್ದು, ಅಂದಾಜು ಮತ್ತು ನಕ್ಷೆಗಳನ್ನು ಪ್ರತಿಯೊಂದು ಭೂಸ್ವಾಧೀನ ಪ್ರಕ್ರಿಯೆಯನ್ನು ತಾವು ಪ್ರಾರಂಭ ಮಾಡಿರತಕ್ಕಂಥದ್ದು. ಅದೇ ಈ ಪ್ರಕ್ರಿಯೆಯನ್ನು ತಾವು ಬೇರೆ ಯೋಜನೆಗಳಿಗೆ ಮಾಡಿಲ್ಲ. ಇದು ಮುಂದುವರೆದ ಕಾಮಗಾರಿ ಎನ್ನತಕ್ಕಂತಹ ದೃಷ್ಟಿಯಿಂದ ತಾವು ಮಾಡಿದ್ದೀರಿ. ಮಾಡತಕ್ಕಂತಹ ಸಂದರ್ಭದಲ್ಲಿ ಇಷ್ಟು ಪ್ರಕ್ರಿಯೆ ನಡೆಯುತ್ತಿರುವಾಗ, ಮೂರನೇ ಹಂತದ ಸರ್ವೆನಲ್ಲಿ ಏಕೆ ವಿಳಂಬ ಎನ್ನತಕ್ಕಂಥದ್ದು ನನ್ನ ಮೂಲಭೂತವಾದ ಪ್ರಶ್ನೆ. ನಾನು ಏಕೆ ಇದನ್ನು ತಮಗೆ ಕೇಳುತ್ತಿದ್ದೇನೆಂದು ನಾವು ಯೋಚನೆ ಮಾಡಬೇಕು. ತಾವೇ ಉತ್ತರದಲ್ಲಿ ಹೇಳಿದ್ದೀರಿ, ಮೂರನೇ ಹಂತದ ನಾಲಾಪಥದ ಅನುಮೋದನೆಯಲ್ಲಿ ಗಂಡಸಿ ಶಾಖಾ ಎಂದು ಹೇಳಿದ್ದೀರಿ. ಆದರೆ ಗಂಡಸಿ ಕ್ಷೇತ್ರಕ್ಕೆ ಏನಾದರೂ ನೀರು ಬರಬೇಕೆಂದರೆ ಆ ಮೂರನೇ ಹಂತದಲ್ಲಿ ಬರಬೇಕು. ಮೊದಲನೇ ಮತ್ತು ಎರಡನೇ ಹಂತಕ್ಕೆ ಇಲ್ಲಿ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ. ಮೂರನೇ ಹಂತದ ಸರ್ವೆ ವಿಚಾರ ಬಂದಾಗ ಮಾತ್ರ

ಈ ದ್ವಂದ್ವ ನೀತಿ, ಅದಕ್ಕೆ ಇಲ್ಲದಂತಹ ತಕರಾರುಗಳು ಪ್ರಾರಂಭವಾಗುತ್ತವೆ. ನಿಮ್ಮ ಅಧಿಕಾರಿಗಳಿಗೆ ಏನಾದರೂ ಮಾಹಿತಿ ಕೇಳಿದರೆ ಎಷ್ಟು ನಿರ್ಲಕ್ಷ್ಯತನದಿಂದ ಹೇಳುತ್ತಾರೆಂದರೆ, ಅವರಿಗೇನಾದರೂ ಗಂಡಸಿ ಕ್ಷೇತ್ರದ ಕೆಲಸಗಳನ್ನು ಮಾಡುವ ಕನಿಷ್ಟ ಆಸಕ್ತಿ ಇದೆಯಾ ಎನ್ನತಕ್ಕಂತಹ ಮಾತನ್ನು ಕೇಳಬೇಕಾಗುತ್ತದೆ. ಅವರ ನಿರ್ಲಕ್ಷ್ಯತೆಯಿಂದ ಇದು ವಿಳಂಬವಾಗುತ್ತಿದೆ. ಇದರಲ್ಲಿ ಬೇರೆ ಏನಿದೆ ಎಂದು ಕೇಳುವುದಕ್ಕೆ ಹೋಗುವುದಿಲ್ಲ. ಈ ವಿಳಂಬಕ್ಕೆ ಅಧಿಕಾರಿಗಳು ಮೂಲಭೂತವಾಗಿ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ನೀವು ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಮತ್ತು ಎಷ್ಟು ದಿವಸಗಳಲ್ಲಿ ಈ ಕಾಮಗಾರಿಯನ್ನು ಮುಗಿಸತಕ್ಕಂತಹ ಕೆಲಸ ಮಾಡುತ್ತೀರಿ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದೆ, ಕಾವೇರಿ ಟ್ರಿಬ್ಯೂನಲ್ ಮುಖಾಂತರ ಒಟ್ಟು 27 ಪ್ರಾಜೆಕ್ಟ್‌ಗಳಲ್ಲಿ 13 ಪ್ರಾಜೆಕ್ಟ್‌ಗಳು ಕಂಪ್ಲೀಟ್ ಆಗಿವೆ. ಇನ್ನು 14 ಪ್ರಾಜೆಕ್ಟ್‌ಗಳು ಪ್ರೋಗ್ರೆಸ್‌ನಲ್ಲಿ ಇವೆ. ಈ ಪ್ರಾಜೆಕ್ಟ್ ಅದರಲ್ಲಿ ಸೇರುತ್ತಿಲ್ಲ. ಆದರೂ ಕೂಡ ತಾವು ಹೇಳುತ್ತಿದ್ದೀರಿ, ಅಧಿಕಾರಿಗಳು ನಿಮಗೆ ಸರಿಯಾಗಿ ಉತ್ತರ ಕೊಟ್ಟಿಲ್ಲ, ಈ ತರಹದ್ದೆಲ್ಲಾ ಖಂಡಿತ ಸರ್ಕಾರಕ್ಕೆ ಶಿವರಾಂ ಬಗ್ಗೆ ಆಗಲಿ, ಗಂಡಸಿ ಬಗ್ಗೆ ಆಗಲಿ ಯಾವುದೇ ಗೊಂದಲ ಇಲ್ಲ, ಶಿವರಾಂರವರ ಗಂಡಸಿ ಕ್ಷೇತ್ರಕ್ಕೆ ಕೂಡ ಆಸಕ್ತಿ ತೋರಿಸುತ್ತೇವೆ. ತಾವು ಬನ್ನಿ ನಿಮ್ಮ ಬಳಿ ಕೂತು ನಿಮಗೆ ಸಮಾಧಾನವಾಗುವ ರೀತಿಯಲ್ಲಿ ಖಂಡಿತ ನಾವು ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಂರವರು ಬಹಳ ಸ್ಪೆಸಿಫಿಕ್ಕಾಗಿ ಹೇಳಿದ್ದಾರೆ. ಕಾಚೇನಹಳ್ಳಿ ಎರಡು ಮತ್ತು ಮೂರನೇ ಹಂತದ ಸರ್ವೆ ಕೆಲಸ ಯಾವಾಗ ಪ್ರಾರಂಭವಾಯಿತು, ಹಾಗೂ ಅದು ಯಾವ ಹಂತದಲ್ಲಿ ಇದೆ ಎಂದು. ಅದಕ್ಕೆ ಉತ್ತರ ಕೊಡಬೇಕು. ಸರ್ವೆ ಪ್ರಗತಿ ವಿಳಂಬವಾಗುವುದಕ್ಕೆ ಕಾರಣಗಳೇನು ಎಂದು ಕೇಳಿದ್ದಾರೆ. ಅವರೂ ಕೂಡ ಮಾಜಿ ಮಂತ್ರಿಗಳಾಗಿದ್ದಾರೆ. ಆ ಭಾಗದ ಶಾಸಕರಾಗಿದ್ದಾರೆ, ಇದರ ಬಗ್ಗೆ ಸ್ಪಸಿಫಿಕ್ಕಾಗಿ ಯಾವಾಗ ತಮಗೆ ಹೇಳುತ್ತಾರೆ, ಆಗ ತಾವು ಇದರಲ್ಲಿ ವಿಳಂಬವಾಗುವುದಕ್ಕೆ ಕಾರಣಗಳೇನು? ಸರ್ವೆ ಏಕೆ ತಡವಾಯಿತು ಅಷ್ಟು ಹೇಳಿದರೆ ಸಾಕು. ನಮಗೇನು ದಯೆ ತೋರಿಸುವುದು ಬೇಕಾಗಿಲ್ಲ. ಸದನದಲ್ಲಿ ಶಾಸಕರಿದ್ದಾರೆ, ಆಗಲಿಲ್ಲವೆಂದರೆ, ಯಾವ ರೀತಿ ಮಾಡಿಸಬೇಕೆಂದು ನಮಗೆ ಗೊತ್ತಿದೆ. ಅದನ್ನು ಮಾಡುತ್ತೇವೆ. That is a different issue. ಸ್ಪಸಿಫಿಕ್ಕಾಗಿ ಹೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಹೇಳಿದರೆ ಸಾಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಏನಾಗಿದೆ, ಮೂರನೇ ಹಂತದ ಅನುಮೋದನೆಯಲ್ಲಿ ಗಂಡಸಿ ಶಾಖಾ ಕಾಲುವೆ ಅಂತಿಮ ಭಾಗದಲ್ಲಿ ಸುಮಾರು 500 ಮೀಟರ್ ಉದ್ದದ ನಾಲೆಯು

22 ಮೀಟರ್‌ಗಳಷ್ಟು ಡೀಪ್ ಕಟಿಂಗ್‌ನಲ್ಲಿ ಸಾಗುತ್ತಿದ್ದು, ಬದಲಿ ಪಥ ನಿರ್ಧರಿಸುವಲ್ಲಿ ವಿಳಂಬವಾಗಿರುತ್ತದೆ. ಇದು ಒಂದು ಅಂಶವನ್ನೂ ಕೂಡ ನಾವು ಅವರಿಗೆ ಹೇಳಿದ್ದೇನೆ. ಎರಡನೆಯದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಈ 27 ಪ್ರಾಜೆಕ್ಟ್‌ಗಳು ಏನಿದೆ, ಅದು ಬಿಟ್ಟು ಹೊಸ ಯಾವುದೇ ಪ್ರಾಜೆಕ್ಟ್ ತೆಗೆದುಕೊಳ್ಳಕೂಡದು ಎಂಬುದು ತಮಗೇ ಗೊತ್ತಿದೆ. ಟ್ರಿಬ್ಯೂನಲ್‌ನಿಂದ ನಮಗೆ ಸೂಚನೆ ಬಂದಿದೆ. ಈ ಎಲ್ಲಾ ಸಮಸ್ಯೆಗಳನ್ನು ಇಟ್ಟುಕೊಂಡು,. ಆದರೂ ಕೂಡ ಆಗಸ್ಟ್‌ನಲ್ಲಿ ನಮಗೆ ಫೈನಲ್ ಅವಾರ್ಡ್ ಬರಬಹುದು ಎಂಬ ನಂಬಿಕೆಯಿಂದ, ಹಿಂದೆ 9 ವರ್ಷಗಳಲ್ಲಿ ನಾಲ್ಕು ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಇದಕ್ಕಾಗಿ ಒಂದೇ ವರ್ಷದಲ್ಲಿ 10 ಕೋಟಿ ರೂಪಾಯಿಗಳಷ್ಟು ಹಣ ಕೂಡ ಇಟ್ಟಿದ್ದೇವೆ. ನಾನು ಅದಕ್ಕೋಸ್ಕರ ಶಿವರಾಂರವರಿಗೆ ಹೇಳುತ್ತಿರುವುದು, ಅವರ ಮನಸ್ಸಿನಲ್ಲಿ ಯಾರೋ ಅಧಿಕಾರಿಗಳು ತಪ್ಪು ಮಾಡುತ್ತಿದ್ದಾರೆ, ಗಂಡಸಿ ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಅನ್ನಿಸಿರುವುದರಿಂದ ನಾನು ಅವರನ್ನೇ ಕೂರಿಸಿಕೊಂಡು ಪರಿಹಾರ ಮಾಡಿ ಆ ಕಾಮಗಾರಿಯನ್ನು ಮುಗಿಸಿ ಕೊಡುತ್ತೇನೆ.

ಶ್ರೀ ಬಿ. ಶಿವರಾಮು: ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ, ತಾವು ಸರ್ವೆ ಯಾವಾಗ ಮುಗಿಸುತ್ತಿರಿ ಎಂದು ಹೇಳಿ. ಟ್ರಿಬ್ಯೂನಲ್ ವಿಚಾರ ನಮಗೂ ಮನವರಿಕೆ ಆಗಿದೆ. ಚೆನ್ನಾಗಿ ತಿಳಿದುಕೊಂಡಿದ್ದೇನೆ. ಸರ್ವೆ ಕಾರ್ಯ ತಾವು ಮಾಡುತ್ತಿದ್ದೀರಿ ಹೌದೋ ಅಲ್ಲವೋ? ಸರ್ವೆ ಮಾಡುತ್ತಿರಬೇಕಾದರೆ ಪರ್ಟಿಕ್ಯುಲರ್‌ಲಿ ಆ ಮೂರನೇ ಹಂತದ ಸರ್ವೆ ಮುಗಿಸತಕ್ಕಂಥದ್ದು ವಿಳಂಬವಾಗಿದೆ. ಅದನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂದು ಹೇಳಿ. ನಾನು ಕೆಲಸ ಪ್ರಾರಂಭ ಮಾಡಿ ಎಂದು ಹೇಳುತ್ತಿಲ್ಲ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. It is a spill over work. ಮುಂದುವರೆದ ಕಾಮಗಾರಿಗಳಲ್ಲಿ ಕಾಚೇನಹಳ್ಳಿ ಮೊದಲನೇ ಹಂತ ನಡೆಯುತ್ತಿದ್ದರಿಂದ, 2 ಮತ್ತು 3ನೇ ಹಂತ ನೀವು ತೆಗೆದುಕೊಂಡಿರತಕ್ಕಂಥದ್ದು. ಸರ್ವೆ ಕೆಲಸ ಅಂತೂ ಮಾಡಿಸುತ್ತಿದ್ದೀರಿ. 2003ಕ್ಕೆ ಪ್ರಾರಂಭವಾಯಿತು, ಮೂರನೇ ಹಂತದ ಸರ್ವೆ ಮಾತ್ರ ವಿಳಂಬವಾಗಿರತಕ್ಕಂಥದ್ದು ಎಷ್ಟು ದಿವಸದಲ್ಲಿ ಮುಗಿಸುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ: ತಕ್ಷಣ ಪ್ರಾರಂಭ ಮಾಡಿ ಅದಷ್ಟು ಬೇಗ ಮುಗಿಸುತ್ತೇನೆ.

ಶ್ರೀ ಬಿ. ಶಿವರಾಮು: ಸರ್ವೆ ನಡೆಯುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ನಿಮ್ಮನ್ನೂ ಕೂರಿಸಿಕೊಂಡು ಡಿಸ್ಕಸ್ ಮಾಡಿ ಆದಷ್ಟು ಬೇಗ ಮುಗಿಸುತ್ತೇನೆ. ಸುಮ್ಮನೆ ಆಶ್ವಾಸನೆ ಕೊಡುವುದಕ್ಕೆ ನಾನು ಖಂಡಿತ ಇಷ್ಟಪಡುವುದಿಲ್ಲ. ನಿಮಗೆ ತೃಪ್ತಿ ಆಗುವ ಹಾಗೆ ನಾನು ಕೆಲಸ ಮಾಡಿಕೊಡುತ್ತೇನೆ. ಸುಮ್ಮನೆ ಏನೋ ಒಂದು ಆಶ್ವಾಸನೆ ಕೊಡುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಶ್ರೀ ಬಿ. ಶಿವರಾಮು: ಆಯಿತು ಅಧಿಕಾರಿಗಳ ಒಂದು ಸಭೆ ಕರೆಯಿರಿ. ಕಾರಣವೇನೆಂದು ಹುಡುಕಿ ಬಗೆಹರಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ: ಖಂಡಿತ ಮಾಡಿ ಕೊಡುತ್ತೇನೆ.

ಶ್ರೀ ಬಿ. ಶಿವರಾಮು: ಧನ್ಯವಾದಗಳು.

ಅಧ್ಯಕ್ಷರು: ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರು (ಸದಸ್ಯರು ಹಾಜರಿರಲಿಲ್ಲ)

ಗುಡಿಬಂಡೆ ಪ್ರಥಮದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಆರಂಭಿಸುವುದು.

154 (876) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಗುಡಿಬಂಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

(ಅ) ಇಲ್ಲ.

(ಅ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಏಕೆ 'ಇಲ್ಲ' ಎಂದು ನಾನು ಕೇಳುತ್ತೇನೆ. ಉದ್ಭವಿಸುವುದಿಲ್ಲವೆಂದರೆ ಏಕೆ ಇಲ್ಲ, ನಾನು ಕೇಳಿರುವುದು ನನ್ನ ಕ್ಷೇತ್ರದ ಗುಡಿಬಂಡೆ ತಾಲ್ಲೂಕಿನಲ್ಲಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶದಿಂದ ಕೇಳಿರತಕ್ಕಂಥದ್ದು. ನಮಗೆ ಆ ಉದ್ದೇಶ ಇಲ್ಲವೆಂದರೆ, ಏಕೆ ಇಲ್ಲವೆಂದು ಕೇಳದೆ ಮತ್ತೇನು ಮಾಡಬೇಕು? ಏಕೆ ಇಲ್ಲ ಹೇಳಿ. ಅಲ್ಲಿ ಅತಿ ಹಿಂದುಳಿದಂತಹ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ವಿಜ್ಞಾನ ಓದಿಸಬಾರದು ಎಂದು ನಿಮ್ಮ ಉದ್ದೇಶವೇನಾದರೂ ಇದೆಯಾ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆ ಎಲ್ಲಾ ಭಾಗಗಳಲ್ಲಿಯೂ ವಿಜ್ಞಾನದ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂಬ ಸದಿಚ್ಛೆ ನಮಗೆ ಇದೆ. ಆದರೆ, ಕಳದೆ ಹಲವಾರು ವರ್ಷಗಳಿಂದ ಈ ರೀತಿ ಹೆಚ್ಚಿನ ವಿಜ್ಞಾನ ಕಾಲೇಜುಗಳನ್ನು ಪ್ರಾರಂಭ ಮಾಡುವ ಪ್ರಕ್ರಿಯೆ ನಿಂತು ಹೋಗಿತ್ತು. ಈ ವರ್ಷ ಪ್ರಾರಂಭ ಮಾಡುತ್ತಿದ್ದೇವೆ. ಪ್ರಾರಂಭ ಮಾಡುವಾಗ ನಮ್ಮ ರಾಜ್ಯದಲ್ಲಿರತಕ್ಕಂತಹ ಅಷ್ಟೂ ಕಡೆ, 174 ತಾಲ್ಲೂಕುಗಳಲ್ಲಿ ಒಟ್ಟಿಗೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಕೆಲವು ಭಾಗದಲ್ಲಿ ಆಗುತ್ತದೆ, ಕೆಲವು ಭಾಗದಲ್ಲಿ ಆಗುವುದಿಲ್ಲ. ದೌರ್ಭಾಗ್ಯವಶಾತ್ ಶ್ರೀರಾಮರೆಡ್ಡಿಯವರ ಕ್ಷೇತ್ರ ಈ ವರ್ಷದ ಅದ್ಯತಾ ಪಟ್ಟಿಯಲ್ಲಿ ಬರುವುದಿಲ್ಲ. ಪ್ರಯತ್ನ ಮಾಡುತ್ತೇನೆ. ಈಗ ಅಷ್ಟೊಂದು